ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 372
2. ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್
3. ಉತ್ತರಿಸಬೇಕಾದ ದಿನಾಂಕ : 15.09.2022
4. ಉತ್ತರಿಸುವ ಸಚಿವರು : ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮರಬ್ಬಿಹಾಳ್ ಗ್ರಾಮದ ಏತ ನೀರಾವರಿ ಯೋಜನೆ ನಿರ್ಮಾಣಕ್ಕಾಗಿ ಬಳ್ಳಾರಿ ವ್ಯಾಪ್ತಿಯಲ್ಲಿ ಶಾಶ್ವತವಾಗಿ ನಿಷ್ಕ್ರೀಯಗೊಂಡಿರುವ ಯೋಜನೆಗಳ ಉಳಿತಾಯದ ನೀರು 0.40 ಟಿ.ಎಂ.ಸಿ.ಯನ್ನು ಬಳಸಿಕೊಳ್ಳಲು ಅವಕಾಶವಿದ್ದು, ಈ ಬಗ್ಗೆ ಜಲಸಂಪನ್ಮೂಲ ಇಲಾಖೆಯ ತುಂಗಭದ್ರ ಮಂಡಳಿ ಸಮಿತಿ ಸಭೆಯಲ್ಲಿ ನೀರನ್ನು ನೀಡಲು ಒಪ್ಪಿಗೆ ದೊರೆತಿರುವುದಾಗಿ ತಿಳಿದು ಬಂದಿದ್ದು ಈ ಯೋಜನೆಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಲು ಸರ್ಕಾರದ ನಿರ್ಧಾರಗಳೇನು; (ಮಾಹಿತಿ ನೀಡುವುದು) | ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮರಬ್ಬಿಹಾಳ್ ಗ್ರಾಮದ ಏತ ನೀರಾವರಿ **ಯೋಜನೆಗೆ ಬೇಕಾಗಿರುವ 0.40 ಟಿ.ಎಂ.ಸಿ.** ನೀರಿನ ಪ್ರಮಾಣವನ್ನು ಬಳ್ಳಾರಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯಡಿ ಬರುವ ಶಾಶ್ವತವಾಗಿ ನಿಷ್ಕ್ರಿಯಗೊಂಡಿರುವ ಹಡಗಲಿ ತಾಲ್ಲೂಕಿನ ಮಾಗಳ, ಹಂದಿಗನೂರು, ರಾಜವಾಳ ಮತ್ತು ಹೆಚ್. ಬಿ. ಹಳ್ಳಿ ತಾಲ್ಲೂಕಿನ ಕೋಗಳಿ ಏತನೀರಾವರಿ ಯೋಜನೆಗಳಿಂದ ಉಳಿತಾಯವಾಗುವ 0.614 ಟಿ.ಎಂ.ಸಿ. ನೀರಿನ ಪ್ರಮಾಣದಲ್ಲಿ ಬಳಸಿಕೊಳ್ಳಲು ಹಾಗೂ ಪ್ರಸ್ತಾಪಿತ ಮರಬ್ಬಿಹಾಳ್ ಗ್ರಾಮದ ಏತ ನೀರಾವರಿ ಯೋಜನೆ ಕಾಮಗಾರಿಗೆ ತುಂಗಭದ್ರಾ ಹಿನ್ನೀರಿನಿಂದ ನೀರೆತ್ತಲು ಅನುಮತಿ ನೀಡುವಂತೆ ಜಲಸಂಪನ್ಮೂಲ ಇಲಾಖೆಯನ್ನು ಕೋರಲಾಗಿರುತ್ತದೆ.<br><br>ಮುಖ್ಯ ಇಂಜಿನೀಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನೀರಾವರಿ ಕೇಂದ್ರ ವಲಯ, ಮುನಿರಾಬಾದ್ ಇವರ ಸಲಹೆಯ ಮೇರೆಗೆ, ಸದರಿ ಯೋಜನೆಗೆಅವಶ್ಯವಿರುವ ನೀರಿನ ಬಳಕೆಯ ಪ್ರಮಾಣವನ್ನು Modified Penman Methodರನ್ವಯ ಪರಿಗಣಿಸಿ ಸದರಿ ಯೋಜನೆಗೆ 0.161 ಟಿ.ಎಂ.ಸಿ. ನೀರಿನ ಪ್ರಮಾಣದ ಅವಶ್ಯಕತೆ ಇರುತ್ತದೆ.<br><br>ದಿನಾಂಕ:26.05.2022ರಂದು ಜರುಗಿದ ತುಂಗಭದ್ರಾ ಮಂಡಳಿಯ 218ನೇ ಸಭೆಯಲ್ಲಿ, ಸದರಿ ಯೋಜನೆಯ ಔಟ್‌ಲೆಟ್‌ನಲ್ಲಿ Electro Magnetic Flowmeter with Telemetryಯನ್ನು ಅಳವಡಿಸಿಕೊಳ್ಳುವ ಷರತ್ತಿಗೊಳಪಟ್ಟು ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ 0.161 ಟಿ.ಎಂ.ಸಿ. ಪ್ರಮಾಣದ ನೀರನ್ನು ಬಳಸಿಕೊಳ್ಳಲು ಅನುಮತಿ ನೀಡಲಾಗಿರುತ್ತದೆ.<br><br>ಸದರಿ ಯೋಜನೆಯ ಸರ್ವೇ ಸಮೀಕ್ಷೆ ಕೈಗೊಂಡು ವಿಸ್ತೃತ ಯೋಜನಾ ವರದಿ ತಯಾರಿಸಲು ಕನ್ಸಲ್ಟಂಟ್‌ರವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಪ್ರಸ್ತುತ ಸರ್ವೇ ಕಾರ್ಯ ಪ್ರಗತಿಯಲ್ಲಿದೆ. |
| ಆ. | ಈ ಮರಬ್ಬಿಹಾಳ್ ಏತ ನೀರಾವರಿ ಯೋಜನೆಯನ್ನು ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು; ಈ ಯೋಜನೆಯ ರೂಪುರೇಷೆಗಳೇನು; (ವಿವರ ನೀಡುವುದು) | ಸದರಿ ಯೋಜನೆಯ ಸರ್ವೇ ಸಮೀಕ್ಷೆ ಕೈಗೊಂಡು ವಿಸ್ತೃತ ಯೋಜನಾ ವರದಿ ತಯಾರಿಸಲು ಒಂದು ತಿಂಗಳ ಕಾಲಾವಕಾಶ ನೀಡಲಾಗಿರುತ್ತದೆ. ತದನಂತರ ವಿಸ್ತೃತ ಯೋಜನಾ ವರದಿಯನ್ನು ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ ಮುಂದೆ ಮಂಡಿಸಿ ತೀರುವಳಿ ಪಡೆದು ಅನುದಾನದ ಲಭ್ಯತೆಯನ್ನು ಆಧರಿಸಿ ಈ ಯೋಜನೆಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು. |
| ಇ. | ಈ ಯೋಜನೆ ಜಾರಿಗೆ ಬಂದ ನಂತರ ಇದರ ಫಲಾನುಭವವನ್ನು ಪಡೆಯುವ ಗ್ರಾಮಗಳು ಯಾವುವು? (ಜಮೀನಿನ ವಿವರಗಳೊಂದಿಗೆ ಮಾಹಿತಿ ನೀಡುವುದು) | ಸದರಿ ಏತ ನೀರಾವರಿ ಯೋಜನೆಯಿಂದ ಮರಬ್ಬೀಹಾಳ್ ತಾಂಡ, ವರದಾಪುರ, ಹಂಪಾಪಟ್ಟಣ, ಉಪನಾಯಕನಹಳ್ಳಿ, ನಾರಾಯಣ ದೇವರಕೆರೆ ಹಾಗೂ ಕೆಂಚಟನಹಳ್ಳಿ ಗ್ರಾಮಗಳು ಫಲಾನುಭವಿ ಗ್ರಾಮಗಳಾಗಿರುತ್ತದೆ. ಸರ್ವೇ ಕಾರ್ಯ ಪೂರ್ಣಗೊಂಡ ನಂತರ ಜಮೀನಿನ ವಿವರಗಳು ಲಭ್ಯವಾಗುವುದು. |

ಸಂಖ್ಯೆ: MID 114 LCQ 2022

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ
ರಚನೆ ಮತ್ತು ಸಣ್ಣ ನೀರಾವರಿ ಸಚಿವರು.